ಶ್ರೀ ಹೆಚ್.ಡಿ. ದೇವೇಗೌಡ —ಇದರ ಬಗ್ಗೆ ಮಾನ್ಯ ಸದಸ್ಯರಿಗೂ ಆಸಕ್ತಿ ಇದೆ ಮತ್ತು ನನಗೂ ಆಸಕ್ತಿ ಇದೆ. ಈಗಾಗಲೇ ನಾವು ಅಪ್ಪರ್ ಭದ್ರಾಕ್ಕೆ ಪ್ರಾಜೆಕ್ಟ್ ರಿಪೋರ್ಟ್‌ನ್ನು ತಯಾರು ಮಾಡಿದ್ದೇವೆ. ಪ್ರಾಜೆಕ್ಟ್ ರಿಪೋರ್ಟ್‌ನ್ನು ಕಾಂಪ್ರಹೆನ್ಸೀವ್ ಆಗಿ ಮಾಡಿದ್ದೇವೆ. ರೇಟ್‌ನ್ನು ಆಲ್ಟರ್‌ನೇಟಿವ್ ಆಗಿ ಕೊಟ್ಟಿರತಕ್ಕಾಂಥಾದ್ದು. ಅದನ್ನು ಮತ್ತೆ ಪರಿಶೀಲನೆ ಮಾಡುತ್ತೇವೆ. ಆದಮೇಲೆ ವಿವರವಾಗಿ ಪರಿಶೀಲನೆ ಮಾಡುತ್ತೇವೆ, ಇದಕ್ಕೆ ಕಾಂಪ್ರಹೆನ್ಸೀವ್ ಎಸ್ಟಿಮೇಟ್ ತಯಾರು ಮಾಡಬೇಕಾಗುತ್ತೆ. ಮಾನ್ಯ ಸದಸ್ಯರು ಹೇಳಿದ್ದು ಎಲ್ಲಾ ಸರಿ. ಸೆಂಟ್ರಲ್ ವಾಟರ್ ಕಮಿಷನ್‌ಗೆ ಹೋಗಬೇಕು. ಆ ಕಮಿಷನ್ ಕ್ಲಿಯರೆನ್ಸ್ ಆಗಬೇಕು ಇದೆಲ್ಲಾ ನಿಜವಾಗಿದೆ ನಾವು ಏಳನೇಯ ಪಂಚವಾರ್ಷಿಕ ಯೋಜನೆಯಲ್ಲಿ ಇದನ್ನು ಸೇರಿಸಬೇಕೆಂದು ನಿರ್ಣಯವನ್ನು ಮಾಡಿದ್ದೇವೆ. ಏಳನೆಯ ಯೋಜನೆಯ ವರ್ಕಿಂಗ್ ಗ್ರೂಪ್‌ನವರು ಇದನ್ನು ಮಾಡಲಿಕ್ಕೆ ಸಾಧ್ಯವಿಲ್ಲ ಎಂದು ಹೇಳಿದ್ದರು.

ಶ್ರೀ ಕೆ ಬಿ. ಕೋಳಿವಾಡ.—ತುಂಗಭದ್ರಾ ಮೇಲ್ದಂಡೆ ಯೋಜನೆ ಪ್ರಾರಂಭ ಮಾಡಿದ್ದು ಎಲ್ಲಿಂದ ? ನಾನು ಕೇಳಿದ್ದು ತುಂಗಭದ್ರಾ ಮೇಲ್ದಂಡೆ ಯೋಜನೆಯ ಬಗ್ಗೆ, ಮಾನ್ಯ ಸಚಿವರು ಭದ್ರಾ ಯೋಜನೆಯ ಬಗ್ಗೆ ಉತ್ತರವನ್ನು ಕೊಟ್ಟರು.

ಶ್ರೀ ಎಚ್.ಡಿ. ದೇವೇಗೌಡ.—It is an by a sceleta estimate. ಇದಕ್ಕೆ ಕಾಂಪ್ರಹೆನ್ಸೀವ್ ಇನ್‌ವೆಸ್ಟಿಗೇಷನ್ ಆಗಬೇಕಾಗುತ್ತದೆ. ಲಿಫ್ಟ್ ಇರಿಗೇಷನ್ ಮಾಡಬೇಕೋ ಅಥವಾ ಫ್ಲೋ ಇರಿಗೇಷನ್ ಮಾಡಬೇಕೋ ಎಂದು ಎರಡೂ ಅಭಿಪ್ರಾಯಗಳು ಇವೆ. ಆದರಲ್ಲಿ ಉತ್ತರವನ್ನು ಕೊಡುವ ಸಂದರ್ಭದಲ್ಲಿ ಪೂರ್ಣವಾಗಿ ವಿವರಗಳನ್ನು ಕೊಡುತ್ತೇನೆ. ನನಗೆ ಈ ವಿಷಯದಲ್ಲಿ ಸಾಕಷ್ಟು ಮೆಮರಿ ಇದೆ ೧೯೭೦ರಲ್ಲಿ ಒಂದು ಸ್ಕೆಲಿಟನ್ ಎಸ್ಟಿಮೇಟ್ ಆಗಿದೆ ಅದಕ್ಕೆ ೪೦೦ ಕೋಟಿ ರೂಪಾಯಿಗಳು ಎಂದುಹೇಳಿದರೆ ಈಗ ಆಗುವುದಿಲ್ಲ. ಇಪ್ಪೊತ್ತು ಒಂದು ಕರಾರುವಕ್ಕಾದ ಅಭಿಪ್ರಾಯಕ್ಕೆ ನಾವು ಬರಬೇಕಾಗಿದೆ. ನಾವು ರೆಗ್ಯೂಲರ್ ಎಸ್ಟಿಮೇಟ್‌ಗೆ ಇನ್ವೆಸ್ಟಿಗೇಷನ್ ಮಾಡಬೇಕಾಗುತ್ತದೆ. ಆದರೆ ಅಧಿಕಾರಿಗಳ ಅಭಿಪ್ರಾಯ ಇದಕ್ಕೆ ೪೦೦ ಕೋಟಿ ರೂಪಾಯಿಗಳನ್ನು ವಿರ್ಚ್ ಮಾಡಿ ೩೭ ಟಿ.ಎಮ್.ಸಿ. ನೀರನ್ನು ಉಪಯೋಗ ಮಾಡಿದರೆ ಸುಮಾರು ಎರಡು ಲಕ್ಷದ, ಮೊವತ್ತನಾಲ್ಕು ಸಾವಿರ ಎಕರೆ ನೀರಾವರಿ ಮಾಡಬಹುದು. ಎನ್ನತಕ್ಕಂತಹ ಒಂದು ಅಭಿಪ್ರಾಯ ಇದೆ.

ಶ್ರೀ ಡಿ.ಜಿ ಬಸವನಗೌಡ —ತಮಗೆ ಗೊತ್ತಿರುವ ಹಾಗೆ ಮಾನ್ಯ ದೇವೇಗೌಡರಿಗೂ ಸಹ ನಮ್ಮ ಕೂಗು ಗೊತ್ತಿದೆ. ತಮ್ಮ ಅವಧಿಯಲ್ಲಾದರೂ ಈ ಯೋಜನೆಯನ್ನು ಪೂರೈಸುತ್ತಿರಾ ಎಂದು ಕೇಳುತ್ತಿದ್ದೇನೆ.

ಶ್ರೀ ಎಚ್.ಡಿ. ದೇವೇಗೌಡ.—ನನ್ನ ಅವಧಿಯಲ್ಲಿ ಮುಗಿಸ ಬೇಕೆಂಬ ಆಸೆ ನನಗೆ ಇದೆ. ಆದರೆ ಹೊಂದರೆ ಇರುವುದು ವಿಟಮಿನ್ ಎಮ್ ವಿಷಯದಲ್ಲಿ ಮಾತ್ರ.

## ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿರುವ ಲೋಕೋಪಯೋಗಿ ಇಲಾಖೆ ರಸ್ತೆಗಳು

೬೫೭ ಶ್ರೀ ಕೃಷ್ಣ (ಕೃಷ್ಣರಾಜಪೇಟೆ).— ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಕೃಷ್ಣರಾಜಪೇಟೆ ತಾಲ್ಲೂಕಿನಲ್ಲಿರುವ ಲೋಕೋಪಯೋಗಿ ಇಲಾಖೆಯ ರಸ್ತೆಗಳ ಸಂಖ್ಯೆ ಎಷ್ಟು ? ಹಾಗೂ ಇದರ ಉದ್ದ ಎಷ್ಟು ? ಇದರಲ್ಲಿ ಡಾಂಬರ್ ಹಾಕಿದ ರಸ್ತೆಗಳ ಸಂಖ್ಯೆ ಎಷ್ಟು ?

ಆ) ಈ ತಾಲ್ಲೂಕಿನಲ್ಲಿ ಇರತಕ್ಕ ಎಲ್ಲ ಲೋಕೋಪಯೋಗಿ ರಸ್ತೆಗಳು ರಿಪೇರಿ ಇಲ್ಲದೆ ವಾಹನ ಸಂಚಾರಕ್ಕೆ ಅನರ್ಹವಾಗಿರುವ ವಿಷಯ ಸರಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ, ಎಲ್ಲ ರಸ್ತೆಗಳನ್ನು ಡಾಂಬರ ರಸ್ತೆಗಳೆನ್ನಾಗಿ ಪರಿವರ್ತಿಸಿ ವಾಹನ ಸಂಚಾರಕ್ಕೆ ಯೋಗ್ಯವನ್ನಾಗಿ ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

ಈ) ಹಿಂದುಳಿದ ತಾಲ್ಲೂಕಾದ ಇಲ್ಲಿ ರಸ್ತೆಗಳ ಅಭಿವೃದ್ಧಿಗೆ ವಿಶೇಷ ಯೋಜನೆ ಏನಾದರೂ ಇದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ರಸ್ತೆಗಳ ಸಂಖ್ಯೆ ೫೧, ಅವುಗಳ ಒಟ್ಟು ಉದ್ದ ೪೧೪ ಕಿ.ಮೀ., ಪೂರ್ತಿ ಉದ್ದಕ್ಕೂ ಡಾಂಬರ್ ಹಾಕಿರುವ ರಸ್ತೆಗಳ ಸಂಖ್ಯೆ ೧೦. ಹಾಗೂ ಇದರ ಉದ್ದ ೧೧೩.೨೦ ಕಿ.ಮೀ.. ಇನ್ನು ಕೆಲವು ರಸ್ತೆಗಳಿಗೆ ಭಾಗಶಃ ಡಾಂಬರ್ ಹಾಕಲಾಗಿದೆ ಮತ್ತು ಇವುಗಳ ಉದ್ದ ೩೦.೭೦ ಕಿ.ಮೀ.

ಆ) ಒಟ್ಟು ೪೧೪ ಕಿ.ಮೀ. ರಸ್ತೆಯ ಪೈಕಿ ೩೧೯ ಕಿ.ಮೀ. ಉದ್ದ ರಸ್ತೆಯು ವಾಹನ ಸಂಚಾರಕ್ಕೆ ಯೋಗ್ಯವಾಗಿದೆ. ಉಳಿದ ೯೫ ಕಿ.ಮೀ. ಉದ್ದದ ರಸ್ತೆಯು ಮಣ್ಣು ರಸ್ತೆಯಾಗಿದ್ದು, ಇದೂ ಸಹ ವಾಹನ ಸಂಚಾರಕ್ಕೆ ಸಾಧಾರಣವಾಗಿ ತೃಪ್ತಿಕರವಾಗಿಯೇ ಇದೆ.

ಇ) ಈ ತಾಲ್ಲೂಕಿನಲ್ಲಿ ಇನ್ನು ಡಾಂಬರು ಆಗದೆ ಉಳಿದಿರುವ ೨೭೦.೧೦ ಕಿ. ಮೀ. ಉದ್ದದ ರಸ್ತೆಯನ್ನು ಡಾಂಬರ್ ರಸ್ತೆಯನ್ನಾಗಿ ಪರಿವರ್ತಿಸಲು ಸುಮಾರು ೩೦೦ ಲಕ್ಷ ರೂಪಾಯಿಗಳು ಬೇಕಾಗಬಹುದು. ಆದ್ದರಿಂದ ಈ ಕೆಲಸವನ್ನು ಆರ್ಥಿಕ ಪರಿಸ್ಥಿತಿಗನು ಗುಣವಾಗಿ ಹಂತ ಹಂತವಾಗಿ ತೆಗೆದುಕೊಳ್ಳುವುದನ್ನು ಪರಿಶೀಲಿಸಲಾಗುವುದು.

ಈ) ಇಲ್ಲ.

ಶ್ರೀ ಕೃಷ್ಣ.—ಈಗ ಅಧಿಕಾರಿಗಳು ೪೧೪ ಕಿ. ಮೀ. ಉದ್ದದ ರಸ್ತೆಗಳ ಪೈಕಿ ೩೧೯ ಕಿ.ಮೀ. ರಸ್ತೆ ವಾಹನ ಸಂಚಾರಕ್ಕೆ ಯೋಗ್ಯವಾಗಿದೆ. ಉಳಿದುದು ೯೫ ಕಿ.ಮೀ. ಸಹ ಸಾಧಾರಣ ತೃಪ್ತಿಕರವಾಗಿದೆ ಎಂದು ಹೇಳಿದ್ದಾರೆ. ಸನ್ಮಾನ್ಯ ಸಚಿವರು ನಮ್ಮ ಪಕ್ಕದ ತಾಲ್ಲೂಕಿನವರೇ. ಅವರಿಗೆ ನಮ್ಮ ರಸ್ತೆಗಳ ಪರಿಸ್ಥಿತಿಯ ಬಗ್ಗೆ ಚೆನ್ನಾಗಿ ಮಾಹಿತಿ ಇದೆ. ಈ ರಸ್ತೆಗಳಿಗೆ ಡಾಂಬರು ಹಾಕುವುದಕ್ಕೆ ಮೂರು ನೂರು ಲಕ್ಷ ರೂಪಾಯಿಗಳು ಬೇಕೆಂದು ಉತ್ತರದಲ್ಲಿ ಹೇಳಿದ್ದಾರೆ. ಡಾಂಬರು ಹಾಕದಿದ್ದರೂ ಸಹ ಸಧ್ಯಕ್ಕೆ ತಂತ್ರಿ ತಿಪೇರಿ ಮಾಡಿ, ಆ ರಸ್ತೆಯನ್ನು ಸಂಚಾರಕ್ಕೆ ಯೋಗ್ಯವಾಗಿ ಮಾಡಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ —ಹೊಸದಾಗಿ ಆಯ್ಕೆಯಾಗಿ ಬಂದಿರತಕ್ಕಂತಹ ಮಾನ್ಯ ಸದಸ್ಯರಿಗೆ ತಮ್ಮ ಕ್ಷೇತ್ರದಲ್ಲಿ ಹೆಚ್ಚು ಹೆಚ್ಚಾಗಿ ಕೆಲಸಕಾರ್ಯಗಳನ್ನು ಮಾಡಿಸಿಕೊಳ್ಳಬೇಕೆಂದು ತುಂಬಾ ಆಸಕ್ತಿಯನು ಹೊಂದಿದ್ದಾರೆ. ಆದರೆ ನಾವು ಸರಕಾರದ ಇತಿಮಿತಿಯನ್ನು ನೋಡಿಕೊಂಡು ಶೀರ್ಮಾನ ಹಾಗೂ ಕೆಲಸವನ್ನು ಮಾಡಬೇಕಾಗುತ್ತದೆ. ಆದುದರಿಂದ ನಾನು ಇಷ್ಟು ಮಾತ್ರ ಹೇಳಬಲ್ಲೆ, ನಮ್ಮ ಆರ್ಥಿಕ ಸ್ಥಿತಿ ಸುಧಾರಿಸಿದ ಕೂಡಲೇ ಆ ಕೆಲಸಕ್ಕೆ ಹಣವನ್ನು ಕೊಡುವ ಬಗ್ಗೆ ಪ್ರಯತ್ನಮಾಡುತ್ತೇನೆ.

## ಬೆಳಗಾವಿ ಜಿಲ್ಲೆಯಲ್ಲಿ ಅಥಣಿ ಮತ್ತು ಕಾಗವಾಡ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ವಿಚಾರ ಕುರಿತು.

೩೨೩. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).—ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಬೆಳಗಾವಿ ಜಿಲ್ಲೆಯ ಅಥಣಿ ಮತ್ತು ಕಾಗವಾಡ ವಿಧಾನ ಸಭಾ ಕ್ಷೇತ್ರಗಳ ವ್ಯಾಪ್ತಿಯಲ್ಲಿ ಬರುವ ರಸ್ತೆಗಳ ಒಟ್ಟು ಉದ್ದವೆಷ್ಟು ?

ಆ) ಈ ಪೈಕಿ ಡೀಲ್ಯಾಗಿಸಿರುವ ಎರಡೂ ಕ್ಷೇತ್ರಗಳಲ್ಲಿ ಬರುವ ರಸ್ತೆಗಳ ಎಷ್ಟು ಉದ್ದಕ್ಕೆ ಡಾಂಬರು ಹಾಕಲಾಗಿದೆ.